ಪಿಡಬ್ಲ್ಯೂಃ1

ಇಂದು ದಿನಾಂಕಃ24.01.2020 ರಂದು ಪಿಡಬ್ಲ್ಯೂಃ1 ರವರನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ 2 ಮತ್ತು 3 ರವರ ಪರ ಶ್ರೀ ಜಿ.ಎಸ್.ಎಮ್ ವಕೀಲರಿಂದಃ

1. ನನ್ನ ತಂದೆ-ತಾಯಿಯ ಹೆಸರು ವೀರಬಸಪ್ಪ ಮತ್ತು ಗದಿಗೆಮ್ಮ ಇರುತ್ತದೆ. ನನ್ನ ತಾಯಿ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಯ ಮರಣದ ನಂತರ ನನ್ನ ತಂದೆ ಮತ್ತೊಂದು ಮದುವೆಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಕೆಯ ಹೆಸರು ಶಾರದಮ್ಮ ಎಂದರೆ ಗೊತ್ತಿಲ್ಲ. ಸದರಿ ಶಾರದಮ್ಮರವರಿಗೆ ಮಕ್ಕಳು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ ಶಾರದಮ್ಮ ಮತ್ತು ಅವರ ಮಕ್ಕಳನ್ನು ಪಕ್ಷಗಾರನ್ನಾಗಿ ಮಾಡಿಲ್ಲ. ದಾವಾ ಆಸ್ತಿಗಳು ನನ್ನ ತಂದೆ ಮತ್ತು ಪ್ರತಿವಾದಿ 1 ರಿಂದ 3 ರವರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ನನ್ನ ತಂದೆಗೆ 1/3 ನೇ ಭಾಗ ಹಿಸ್ಸೆ ಇದೆ ಎಂದರೆ ಸರಿ. ಸದರಿ ಹಿಸ್ಸೆಯಲ್ಲಿ ನನಗೆ ಮತ್ತು ಶಾರದವ್ವರವರಿಗೆ ಹಿಸ್ಸೆ ಇದೆ ಎಂದರೆ, ಸಾಕ್ಷಿಯು ನಾನು ಮೃತ್ಯು ಪತ್ರದ ಪ್ರಕಾರ ಮಾಲೀಕಳು ಇದ್ದು, ಶಾರದವ್ವರವರಿಗೆ ಹಕ್ಕು ಇದೆ ಇಲ್ಲವೊ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ದಾವಾ ಆಸ್ತಿಗಳನ್ನು ನಾನು ಮತ್ತು ಪ್ರತಿವಾದಿಯರು ಒಟ್ಟಿಗೆ ಸಾಮೂಹಿಕವಾಗಿ ವಹಿವಾಟು ಮಾಡುತ್ತಿದ್ದೇವೆ ಎಂದರೆ, ಸಾಕ್ಷಿಯು ನಾನೇ ವ್ಯವಸಾಯ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಂದೆಯ 1/3 ನೇ ಭಾಗದ ಹಿಸ್ಸೆಯಲ್ಲಿ ನಾನು ಮತ್ತು ಶಾರದವ್ವ ಸ್ವಾಧೀನದಲ್ಲಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಯಾವುದೇ ಮೃತ್ಯು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-10 ನಾನೇ ಸೃಷ್ಟಿ ಮಾಡಿಕೊಂಡಿರುವ ಮೃತ್ಯು ಪತ್ರದ ಎಂದರೆ ಸರಿಯಲ್ಲ. ಅದರಲ್ಲಿರುವ ಸಹಿ ನನ್ನ ತಂದೆಯದ್ದಲ್ಲ ಎಂದರೆ ಸರಿಯಲ್ಲ. ದಾವಾದ ಆಸ್ತಿಗಳು ನಮ್ಮೆಲ್ಲರ ಸಾಮೂಹಿಕ ಸ್ವಾಧೀನಾನುಭವದಲ್ಲಿರುವುದರಿಂದ, ನನ್ನ ತಂದೆಗೆ ಮೃತ್ಯು ಪತ್ರ ಬರೆದುಕೊಡುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಿಪಿ-10 ಖೊಟ್ಟಿ ದಾಖಲಾತಿ ಇರುವುದರಿಂದ, ಆ ಪ್ರಕಾರ ನನಗೆ ಯಾವುದೇ ಮಾಲೀಕ ಸ್ವಾಧೀನವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಹಿರೇಕೆರೂರು.